# ಆಹಾ ಸುದ್ದಿ!

★ ಸಸಿತೋಟ



ಮಲೇಷ್ಯಾದ ಈ ಜೋಡಿ ತಮ್ಮ ಮದುವೆ ಫೋಟೊ ನೆನಪಿನಲ್ಲಿರಬೇಕೆಂದು ಮೂರು ತಿಂಗಳುಗಳ ಕಾಲ ಬೇರೆ ಬೇರೆ ದೇಶಗಳನ್ನು ಸುತ್ತಿ ಫೋಟೋಶೂಟ್ ಮಾಡಿಕೊಂಡಿದ್ದಾರಂತೆ. ಸ್ವತಃ ಛಾಯಾಗ್ರಾಹಕನಾದ ವರ ಲೂಂಗ್ ರಿಮೋಟ್ ಕಂಟ್ರೋಲ್ ಕ್ಯಾಮೆರಾ ಮೂಲಕ ಚಿತ್ರ ತೆಗೆಯಲು ಹರಸಾಹಸ ಪಟ್ಟರೆ, ವಧು ತನ್ನ ಮದುವೆ ಉಡುಪು, ಮೇಕಪ್ ಸಾಧನಗಳನ್ನು ಹೊತ್ತೊಯ್ಯಲು ಕಷ್ಟಪಟ್ಟಳಂತೆ.



ಕರಾಚಿಯಲ್ಲಿ ತನ್ನ ಮುದ್ದಿನ ಪ್ರಾಣಿಯನ್ನು ಟ್ರಕ್ ಒಂದರಲ್ಲಿ ವಿಹಾರಕ್ಕೆ ಕರೆದುಕೊಂಡು ಹೋಗಿದ್ದ ವ್ಯಕ್ತಿಯನ್ನು ಬಂಧಿಸಿದ್ದಾರಂತೆ. ಆ ಮುದ್ದಿನ ಸಾಕು ಪ್ರಾಣಿ ಸಿಂಹವಾಗಿದ್ದು, ಅದಕ್ಕೆ ಬೇಸರ ಬಂದಿದ್ದಕ್ಕೆ ಔಟಿಂಗ್ ಎಂದು ಆತ ಮೊಂಡು ವಾದ ಹೂಡಿದ್ದಾನಂತೆ. ರಸ್ತೆಯುದ್ದಕ್ಕೂ ಜನ ಭಯಭೀತರಾಗಿ ಬಾಯಿಯ ಮೇಲೆ ಕೈ ಇಟ್ಟರೆ, ಸಿಂಹ ಮಾತ್ರ ಆಕಳಿಸುತ್ತ, ತನ್ನ ಆಯುಧವನ್ನು ಪ್ರದರ್ಶಿಸುತ್ತಿತ್ತಂತೆ.

ಅಮೆರಿಕದ ವೆಜ್ಮರ್ ಎಂಬಾತ ತನ್ನ ಸ್ನೇಹಿತೆಯನ್ನು ಸಿನಿಮಾ ನೋಡಲು ಕರೆದುಕೊಂಡು ಹೋಗಿದ್ದನಂತೆ. ಆದರೆ ಆಕೆ ಸಿನಿಮಾ ವೀಕ್ಷಣೆ ಬಿಟ್ಟು ಮೊಬೈಲ್‌ನಲ್ಲಿ ಮೆಸೇಜ್ ಕಳಿಸುತ್ತ ಕೂತಿದ್ದಕ್ಕೆ ಸಿಟ್ಟಿಗೆದ್ದ ಆತ ಈಗ ಕೋರ್ಟ್ ಕಟಕಟೆ ಏರಿದ್ದಾನಂತೆ, ಆಕೆಗಾಗಿ ಮಾಡಿದ ಖರ್ಚನ್ನು ವಾಪಸ್ಸು ಕೊಡಿಸಬೇಕು ಎಂದು. ವೆಜ್ಮರ್‌ಗೆ ಹಣ ವಾಪಸ್ ಬಂತೇ ಎಂಬುದು ಗೊತ್ತಾಗಿಲ್ಲ, ಆದರೆ ಆ ಸಿನಿಮಾ ನಿರ್ದೇಶಕ ಜೇಮ್ಸ್ ಗನ್ ವೆಜ್ಮರ್‌ಗೆ ಧನ್ಯವಾದ ಹೇಳಿದ್ದಾನಂತೆ, ಸಿನಿಮಾ ಹಾಲ್‌ನಲ್ಲಿ ಮೊಬೈಲ್ ವೀಕ್ಷಣೆ ವಿರುದ್ಧ ದನಿ ಎತ್ತಿದ್ದಕ್ಕೆ.



ಉತ್ತರ ಕೊರಿಯಾದ ಈ ಚೆಲುವೆ ಅಲ್ಲಿ ಸಂಚಾರಿ ಪೊಲೀಸ್. ಇದು ಹೆಸರಿಗಷ್ಟೆ. ಪ್ರವಾಸಿಗರನ್ನು, ವಿದೇಶಿ ಪತ್ರಕರ್ತರನ್ನು ಸೆಳೆಯಲು ಸುಂದರಿಯರನ್ನು ಈ ಸ್ಥಾನಕ್ಕೆ ನೇಮಿಸುತ್ತಾರಂತೆ. ನಿವೃತ್ತಿ ವಯಸ್ಸು 26 ವರ್ಷ. ಮದುವೆಯಾದರೆ ತಕ್ಷಣ ಉದ್ಯೋಗ ತ್ಯಜಿಸಬೇಕು. ಉದ್ಯೋಗಿಗಳ ಶೆಲ್ಫ್‌ಲೈಫ್ ಆಹಾರ ಪದಾರ್ಥಗಳಿಗಿಂತ ಕಡಿಮೆ!

ಮೆಕ್ಸಿಕೋದ ಈ ಹೊಸ ಬಿಯರ್ ಬಾಟಲ್ ಮೇಲೆ ಮೆಕ್ಸಿಕನ್ ಗಾಯಕನ ವೇಷದಲ್ಲಿರುವ ಅಮೆರಿಕದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಚಿತ್ರ ಅಂಟಿಸಲಾಗಿದೆ. ಟ್ರಂಪ್ ತಲೆಗೂದಲಿನ ಬಣ್ಣ ಕೇಸರಿಯನ್ನು ಬಿಯರ್‌ಗೂ ಕೊಡಲಾಗಿದೆಯಂತೆ. ಟ್ರಂಪ್ ಹೇಳುವುದೆಲ್ಲ ಸುಳ್ಳು, ಗಡಿಯಾಚೆಗಿನ ಜನ ಬಿಯರ್ ಮೂಲಕ ಸ್ನೇಹಿತರಾಗುತ್ತಾರೆ ಎಂಬುದನ್ನು ತೋರಿಸಲು ಈ ಪ್ರಯತ್ನವಂತೆ. ಆದರೆ ಟ್ರಂಪ್ ತರಹ ಇದೂ ಕೂಡ ಕಹಿ ಕಹಿಯಾಗಿರುವುದಂತೂ ಸತ್ಯ.



ಅಮೆರಿಕದ ತರುಣನೊಬ್ಬ ತನ್ನ ಮನೆಯಲ್ಲಿ ತಿಗಣೆಯ ಜೊತೆ ಸೆಣಸಾಡಿ ಸೋತು ನೆರವಿಗಾಗಿ ನಗರಾಡಳಿತ ಸಂಸ್ಥೆಯ ಮೊರೆ ಹೋದನಂತೆ. ಸಿಬ್ಬಂದಿ ನಿರಾಕರಿಸಿದಾಗ ಆ ತರುಣ ಕಪ್‌ನಲ್ಲಿ ತಿಗಣೆಗಳನ್ನು ತುಂಬಿಕೊಂಡು ಬಂದು ಸಂಸ್ಥೆಯ ಕಚೇರಿಯೊಳಗೆ ಎಸೆದನಂತೆ. ಈಗ ನಗರಾಡಳಿತದವರು ಕಚೇರಿ ಮುಚ್ಚಿ ತಿಗಣೆ ನಿಯಂತ್ರಿಸುವವರಿಗಾಗಿ ಹುಡುಕಾಡುತ್ತಿದ್ದಾರಂತೆ. ಸಿಬ್ಬಂದಿ ಮನಸ್ಸಿನಲ್ಲೇ ತರುಣನಿಗೆ ಧನ್ಯವಾದ ಹೇಳುತ್ತಿರುಬಹುದು, ರಜೆ ಕೊಡಿಸಿದ್ದಕ್ಕೆ.